ಈ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಲು ಮಹಾಮಂಡಳಕ್ಕೆ ಸೂಚಿಸಲಾಗಿರುತ್ತದೆ. ಮಹಾಮಂಡಳದ ಲೆಕ್ಕಪತ್ರಗಳು ತಹಲ್‌ವರೆಗೆ ಪರಿಶೋಧಿತವಾಗಿ ವರದಿಗಳು ಬಂದ ನಂತರವೇ ಹಣದ ದುರುಪಯೋಗದ ನಿಖರ ವಿವರಗಳು ಲಭ್ಯವಾಗುತ್ತವೆ.

44 ಎ.ಬಿ. ಪ್ರಕರಣದ ಲೆಕ್ಕಪರಿಶೋಧನಾ ವರದಿಗಳ ಬಿಡುಗಡೆ ಬಗ್ಗೆ

23 (07) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು): ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಹಾಗೂ ರಾಜ್ಯದ ಎಲ್ಲಾ ಸಹಕಾರ ಸಂಘಗಳ ಉಪ ನಿರ್ದೇಶಕರ ಕಛೇರಿಗಳಿಂದ 2009–10 ಮತ್ತು 2010–11ನೇ ಸಾಲುಗಳಲ್ಲಿ ಜಿಲ್ಲಾ ಹಾಲು ಒಕ್ಕೂಟದ, ಮಹಾಮಂಡಳಿಗಳ ಹಾಗೂ 44 ಎಬಿ ಪ್ರಕರಣದ ವ್ಯಾಪ್ತಿಗೆ ಸಂಬಂಧಪಟ್ಟ ಲೆಕ್ಕ ಪರಿಶೋಧನಾ ವರದಿಗಳು ಬಿಡುಗಡೆಯಾದ ಸಹಕಾರ ಸಂಘಗಳ ಸಂಖ್ಯೆ ಎಷ್ಟು ;

ಆ) ಈ ಸಂಘಗಳ ಪೈಕಿ ಲೆಕ್ಕಪರಿಶೋಧನಾ ವರದಿಗಳಂತೆ ಆದಾಯ ತೆರಿಗೆ ಕಾಯಿದೆಯ ಪ್ರಕಾರ ಸವಕಳಿ ಅವಕಾಶ ಮಾಡಿರುವ ಸಂಘಗಳ ಸಂಖ್ಯೆ ಎಷ್ಟು ; (ಅವುಗಳ ಪಟ್ಟಿ ಒದಗಿಸುವುದು)

ಇ) ಲೆಕ್ಕ ಪರಿಶೋಧನಾ ವರದಿಗಳಂತೆ ಸಹಕಾರಿ ಕಾಯಿದೆ, ಸಹಕಾರ ಸಂಘಗಳ ನಿಬಂಧಕರ ನಿರ್ದೇಶಕ್ಕೆ ಅನುಗುಣವಾಗಿ ಸವಕಳಿ ತೆಗೆದಿರುವ ಸಂಘಗಳ ಸಂಖ್ಯೆ ಎಷ್ಟು ; (ಅವುಗಳ ಪಟ್ಟಿ ಒದಗಿಸುವುದು)

ಈ) ಸಹಕಾರ ಸಂಘಗಳ ಲೆಕ್ಕ ಪರಿಶೋಧನೆ ಪ್ರಕ್ರಿಯೆಯಲ್ಲಿ ಸವಕಳಿ ತೆಗೆಯುವುದಕ್ಕೆ ಅನುಸರಿಸಬೇಕಾದ ನೀತಿ ನಿಯಮಗಳು ಮತ್ತು ನಿರ್ದೇಶನಗಳ ವಿವರಗಳ ಮಾಹಿತಿ ನೀಡುವುದು ?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು):

ಅ)

2009–10	797
2010–11	564

ಆ)

2009–10	354
2010–11	265

ಇ)

2009–10	443
2010–11	299

ಈ) ಕರ್ನಾಟಕ ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆ ಆರ್.ಎಸ್.ಆರ್.1:ಎಕ್ಸ್ಎಂಎ:1988–89, ದಿನಾಂಕ: 25.8.1992 ಸಹಕಾರ ಸಂಘಗಳ ನಿಯಮಾವಳಿಗಳು 1960ರ ನಿಯಮ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್‌ನ ಸುತ್ತೋಲೆ ಸಂಖ್ಯೆ: ಯುಬಿಡಿ ನಂ. ಬಿಪಿಡಿ: ಸುತ್ತೋಲೆ 7, ದಿನಾಂಕ: 5.8.2003 ರಂತೆ ಸಹಕಾರ ಸಂಘಗಳು ವಿವಿಧ ಆಸ್ತಿಗಳ ಮೇಲೆ ಸವಕಳಿಯನ್ನು ತೆಗೆಯಬೇಕಿರುತ್ತದೆ.

ಆದಾಯ ತೆರಿಗೆ ಕಾಯ್ದೆ ವ್ಯಾಪ್ತಿಗೊಳಪಡುವ ಸಂಸ್ಥೆಗಳು ಸದರಿ ಕಾಯ್ದೆಯಡಿ ನಿಗದಿಪಡಿಸಿರುವಂತೆ ಸವಕಳಿ ತೆಗೆಯಬೇಕಿರುತ್ತದೆ. ಅದರಂತೆ 2009–10 ಮತ್ತು 2010–11ನೇ ಸಾಲುಗಳಲ್ಲಿ ಬಿಡುಗಡೆಯಾಗಿರುವ ವರದಿಗಳನ್ನು ಆದಾಯ ತೆರಿಗೆ ಕಾಯಿದೆಯಲ್ಲಿನ ಹಾಗೂ ಸಹಕಾರ ಸಂಘಗಳ ನಿಬಂಧಕರ ಸೂಚನೆಗಳನ್ನು ಅನುಸರಿಸಿರಿಸಲಾಗಿದೆ. ಸವಕಳಿ ತೆಗೆದಿರುವ ಸಂಸ್ಥೆಗಳ ಪಟ್ಟಿಯನ್ನು ಇದರೊಂದಿಗೆ ಸಲ್ಲಿಸಿದೆ.

ಲೆಕ್ಕ ಪರಿಶೋಧಿತ ಪುಸ್ತಕಗಳನ್ನೇ ಮರುಪರಿಶೀಲಿಸುವುದು

24 (9) ಶ್ರೀ ಪುಟ್ಟೇಗೌಡ ಸಿ.ಎಸ್. (ಶ್ರವಣಬೆಳಗೊಳ): ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರಾಜ್ಯಮಟ್ಟದ ಹಾಗೂ ಎಲ್ಲಾ ರೀತಿಯ ಸಹಕಾರ ಸಂಘಗಳ ವಿರುದ್ಧ ಇದುವರೆವಿಗೂ ಸಹಕಾರಿ ಕಾಯಿದೆ ಕಲಂ 63(11)ರಡಿಯಲ್ಲಿ ಲೆಕ್ಕಪರಿಶೋಧಿತ ಲೆಕ್ಕ ಪುಸ್ತಕಗಳನ್ನು ಮರುಪರಿಶೀಲನೆಗೆ ಆದೇಶಿಸಲಾಗಿದೆಯೇ ;

ಆ) ಇಂತಹ ಒಟ್ಟು ಸಹಕಾರ ಸಂಘಗಳ ಸಂಖ್ಯೆ ಎಷ್ಟು ;

ಇ) ಈ ರೀತಿ ಮರುಪರಿಶೀಲನೆಯಲ್ಲಿ ಆಡಿಟ್ ವರದಿಗೆ ಭಿನ್ನವಾಗಿ ಗಂಭೀರ ಲೋಪದೋಷಗಳು ಹಾಗೂ ಹಣದುರುಪಯೋಗ ಬೆಳಕಿಗೆ ಬಂದ ಪ್ರಕರಣಗಳ ಸಂಖ್ಯೆ ಎಷ್ಟು ; ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ;

ಈ) ಈ ದಿನಾಂಕಕ್ಕೆ ಮರುಪರಿಶೀಲನೆ ನಡೆಯುತ್ತಿರುವ ಸಂಘಗಳ ಸಂಖ್ಯೆ ಎಷ್ಟು ?